ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

## e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 10 ಅಕ್ಟೋಬರ್ – ಡಿಸೆಂಬರ್ 2023 ಸಂಚಿಕೆ: 1

## ಸುಸ್ಥಿರ ಆಹಾರ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಸಿರಿಧಾನ್ಯಗಳ ಬೆಳೆಯನ್ನು ಉತ್ತೇಜಿಸುವ ಕಾರ್ಯಗಾರ

ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು, ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ಅರಣ್ಯ ಇಲಾಖೆ, ತುಮಕೂರು ಜಿಲ್ಲೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಿಪಟೂರು ಇವರುಗಳ ಸಹಯೋಗದೊಂದಿಗೆ ಕೃಷಿ ವಜ್ಞಾನ ಕೇಂದ್ರ, ಕೊನೇಹಳ್ಳಿಯಲ್ಲಿ ಸುಸ್ಥಿರ ಆಹಾರ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಸಿರಿಧಾನ್ಯಗಳ ಬೆಳೆಯನ್ನು ಉತ್ತೇಜಿಸುವ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು, ಸಿರಿಧಾನ್ಯಗಳ ರಾಶಿಗೆ ಪೂಜಿಸಿ, ಗಿಡಕ್ಕೆ ನೀರಿನಿಂದ ಪೋಷಿಸಿ ಹಾಗೂ ದೀಪ ಬೆಳಗುವುದರ ಮೂಲಕ ಉದ್ಘಾಟಿಸಲಾಯಿತು. ಶ್ರೀ. ಜಗತ್‌ರಾಮ್, ಭಾ.ಅ.ಸೇ., ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು ಇವರು ಮಾತನಾಡಿ ಇತ್ತಿಚಿನ ದಿನಗಳಲ್ಲಿ ಜನರಿಗೆ ಸಿರಿಧಾನ್ಯಗಳು ಮಹತ್ವದ ಬಗ್ಗೆ ಅರಿವು ಮೂಡುತ್ತಿದೆ. ಸಿರಿಧಾನ್ಯಗಳ ಮೌಲ್ಯವರ್ಧನೆಯ ಬಗ್ಗೆ ಇನ್ನು ಹೆಚ್ಚು ಮಹಿಳೆಯರು ಗಮನ ಹರಿಸಬೇಕೆಂದರು.



ಡಾ. ಎಂ.ಜೆ. ಚಂದ್ರೇಗೌಡ, ಪ್ರಧಾನ ವಿಜ್ಞಾನಿಗಳು (ಕೃಷಿ ವಿಸ್ತರಣೆ) ಹಾಗೂ ನೋಡಲ್ ಅಧಿಕಾರಿಗಳು, ಐ.ಸಿ.ಎ.ಆರ್., ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರು ಮಾತನಾಡಿ ಸುಸ್ಥಿರತೆಯ ಮೊದಲ ಅವಶ್ಯಕತೆಯೆಂದರೆ ಆರ್ಥಿಕ ಸುಸ್ಥಿರತೆ ಎನ್ನುವುದರ ಜೊತೆಗೆ ಸಿರಿಧಾನ್ಯಗಳು ಹೆಚ್ಚಿನ ರೀತಿಯಲ್ಲಿ ಬೆಳೆದು ಮೌಲ್ಯವರ್ಧನೆಯ ಕಡೆ ಹೆಚ್ಚು ಗಮನವಹಿಸಿದರೆ ಆರ್ಥಿಕ ಸುಸ್ಥಿರತೆಯನ್ನು ಕಾಪಾಡಿಕೊಳ್ಳಬಹುದು ಎಂದು ಕರೆಕೊಟ್ಟರು.

ಡಾ.ವಿ.ಗೋವಿಂದಗೌಡ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮಾತನಾಡಿ ಮಳೆ ಕಡಿಮೆ ಬರುವಂತಹ ಜಾಗದಲ್ಲಿಯೂ ಹಾಗೂ ಎಲ್ಲಾ ಹವಾಮಾನ ಪರಿಸ್ಥಿತಿಗೆ ಹೊಂದುಕೊಳ್ಳುವ ಬೆಳೆಗಳೆಂದರೆ ಸಿರಿಧಾನ್ಯಗಳು ಎಂದು ತಿಳಿಸಿದರು. ಮುಂದುವರೆದು, ಸಜ್ಜೆ ತಿಂದು ಹೆಜ್ಜೆ ಹಾಕು , ಸಜ್ಜೆ ತಿಂದು ಬಾರ ಹೊರು, ಬರಗು ಇದ್ದರೆ ಬರದಲ್ಲೂ ಜೀವನ ನಿರ್ಮಾಣ ಮಾಡಬಹುದು. ಹಾರಕ ತಿಂದವರು ಹಾರಾಡುತ್ತಾ ಹೋದರು, ಊದಲು ತಿಂದರೆ ಉಬ್ಬಸನೆ ಬರುವುದಿಲ್ಲ ಎನ್ನುವುದರ ಮೂಲಕ ಸಿರಿಧಾನ್ಯಗಳಿಗೆ ಇರುವ ಮೌಲ್ಯತೆಯನ್ನು ವಿವರಿಸಿದರು.

ಶ್ರೀ. ಎಂ.ಜೆ. ಗೋವರ್ಧನ ಸಿಂಗ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು ಇವರು ಮಾತನಾಡಿ ಸಿರಿಧಾನ್ಯಗಳಲ್ಲಿ ಅತಿ ಹೆಚ್ಚಿನ ಪೋಷಕಾಂಶಗಳು ಇರುವುದರಿಂದ ಇತ್ತೀಚಿನ ದಿನಗಲ್ಲಿ ಹೆಚ್ಚಾಗುತ್ತಿರುವ ವಿವಿಧ ರೀತಿಯ ಕಾಯಿಲೆಗಳನ್ನು ಕಡಿಮೆ ಮಾಡಬಹುದು ಮತ್ತು ಸಿರಿಧಾನ್ಯಗಳು ಗ್ಲುಟೀನ್ ರಹಿತ ಆಗಿರುವುದರಿಂದ ದೇಹಕ್ಕೆ ಒಳ್ಳೆಯದು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಡಾ. ಪದ್ಮನಾಭನ್, ವಿಜ್ಞಾನಿಗಳು(ಕೃಷಿ ಹವಾಮಾನ) ಕೃಷಿ ವಿಜ್ಞಾನ ಕೇಂದ್ರ,ಕೊನೇಹಳ್ಳಿ ಸಿರಿಧಾನ್ಯಗಳ ಕೃಷಿ ಮತ್ತು ಮಾರುಕಟ್ಟೆ ಬಗ್ಗೆ ತಾಂತ್ರಿಕ ಅಧೀವೇಶನ ನಡೆಸಿಕೊಟ್ಟರು. ಡಾ. ನಿತ್ಯಶ್ರೀ ಕೆ. ವಿಜ್ಞಾನಿಗಳು (ಗೃಹ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಇವರು ಸಿರಿಧಾನ್ಯಗಳ ಮೌಲ್ಯವರ್ಧನೆ ಮತ್ತು ಆರೋಗ್ಯದ ಕುರಿತು ತಾಂತ್ರಿಕ ಅಧಿವೇಶನದಲ್ಲಿ ನಾವು ನಿತ್ಯ ಬಳಸುವ ಅಕ್ಕಿ, ಗೋಧಿಗಿಂತ ಸಿರಿಧಾನ್ಯಗಳಲ್ಲಿ ಹೆಚ್ಚಿನ ಪ್ರೋಟೀನ್, ವಿಟಮಿನ್, ನಾರಿನಾಂಶ ಖನಿಜ ಹಾಗೂ ಉತ್ತಮ ಕೊಲೆಸ್ಟ್ರಾಲ್ ಒಳಗೊಂಡಿದೆ. ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ, ಬೊಜ್ಜು, ಕ್ಯಾನ್ಸರಂತಹ ರೋಗಿಗಳನ್ನು ತಡೆಯಲು ಸಿರಿಧಾನ್ಯ ರಾಮ ಬಾಣವಾಗಿದೆ. ಆದ್ದರಿಂದ ಅಕ್ಕಿ ಬಳಸಿದಂತಹೆ ಇವುಗಳನ್ನು ಉತ್ಪಾದಿಸಿ ಹಾಗೂ ಅದನ್ನು ಬಳಸಿ ಊಟ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತರು ಹಾಗೂ ರೈತ ಮಹಿಳೆಯರು ತಯಾರಿಸಿದ ಸಿರಿಧಾನ್ಯಗಳ ಖಾದ್ಯಗಳು ನೋಡುಗರ ಬಾಯಲ್ಲಿ ನೀರುರಿಸುತ್ತಿದ್ದವು. ಕಾರ್ಯಕ್ರಮದಲ್ಲಿ ಕೆ.ವಿ.ಕೆ ವಿಜ್ಞಾನಿಗಳಾದ ಶ್ರೀ ದರ್ಶನ್ ಎಂ.ಈ. ಡಾ ಕೀರ್ತಿಶಂಕರ್ ಕೆ., ಡಾ ತಸ್ಮೀಯಾ ಕೌಸರ್, ಶ್ರೀ ಮನೋಜ್ ಹೆಚ್., ಶ್ರೀ ಶ್ರೀಧರ ಮೂರ್ತಿ, ಡಾ ಸತೀಶ್ ಹೆಚ್.ಎಸ್., ಶಿಶು ಅಭಿವೃದ್ದೀ ಮೇಲ್ವಿಚಾರಕರಾದ ಪ್ರೇಮ, ಅರಣ್ಯ ಇಲಾಖೆಯ ಶ್ರೀ ದೇವರಾಜು ವಿ, ಶ್ರೀ ಲಕ್ಷ್ಮೀ ನಾರಾಯಣ ಪಿ.ಟಿ., ಶ್ರೀ ಸುಬ್ಬರಾವ್, ಶ್ರೀ ಚಿಕ್ಕ ರಾಜೇಂದ್ರ, ಶ್ರೀ ನಾಗೇಶ್ ಹಾಗೂ ಮಂಡಳಿಯ ಕೆ.ಆರ್ ಪ್ರಸನ್ನ, ಪವಿತ್ರ, ಅಂಗನವಾಡಿ ಕಾರ್ಯಕರ್ತರು ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

## ಸಿರಿಧಾನ್ಯಗಳ ಪಾಕ ಸ್ಪರ್ಧೆ/ಆಹಾರ ಮೇಳ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹಾಗೂ ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ತಿಪಟೂರು ವತಿಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಮತ್ತಿಘಟ್ಟ ಗಾಮದಲ್ಲಿ ಸಿರಿಧಾನ್ಯಗಳ ಪಾಕ ಸ್ಪರ್ಧೆ/ಆಹಾರ ಮೇಳವನ್ನು ಹಮ್ಮಿಕೊಳ್ಳಲಾಗ್ಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಆದ ಡಾ. ವಿ ಗೋವಿಂದ ಗೌಡ ಮಾತನಾಡಿ ನಮ್ಮ ರಾಜ್ಯದಲ್ಲಿ ರಾಗಿ, ಸಜ್ಜೆ, ನವಣೆ, ಬರಗು, ಹಾರಕ, ಸಾಮೆ, ಊದಲು, ಕೊರಲೆಯಂತಹ ಸಿರಿಧಾನ್ಯಗಳನ್ನು ನೋಡಬಹುದು ಆದರೆ ಇವುಗಳಲ್ಲಿ ಹೆಚ್ಚಾಗಿ ಬಳಸುವುದು ರಾಗಿಯನ್ನು ಮಾತ್ರ ಇನ್ನುಳಿದ ಧಾನ್ಯಗಳನ್ನು ಉಪಯೋಗಿಸುವುದು ಕಡಿಮೆಯಾಗಿದೆ, ನಮ್ಮ ಪೂರ್ವಜರು ಹೆಚ್ಚಾಗಿ ಉಪಯೋಗಿಸುತ್ತಿದ್ದ ಸಿರಿಧಾನ್ಯಗಳಾದ ನವಣೆ, ಸಾಮೆ, ಹಾರಕ ಮತ್ತು ಕೊರಲೆಯಿಂದ ಮಾಡುತ್ತಿದ್ದ ಅನ್ನ, ಮುದ್ದೆ, ರೊಟ್ಟಿ ಉತ್ತಮ ಆಹಾರವಾಗಿತ್ತು ಹಾಗೂ ಅವರು ಆರೋಗ್ಯವಂತರಾಗಿ ಬಲಿಷ್ಟರಾಗಿ ದಿನವೆಲ್ಲ ಕೆಲಸ ಮಾಡಿದರು ಆಯಾಸಗೊಳ್ಳುತ್ತಿರಲಿಲ್ಲ, ತಾನು ಚಿಕ್ಕವನಿದ್ದಾಗ ಹಳ್ಳಿಯಲ್ಲಿ ಹಾರಕದ ಅನ್ನಕ್ಕೆ ಮೊಸರು ಬೆರಸಿ ಸವಿಯುತ್ತಿದ್ದ ದಿನಗಳನ್ನು ಮೆಲುಕು ಹಾಕಿದರು. ಸಿರಿಧಾನ್ಯಗಳು ಭವಿಷ್ಯದ ಬೆಳೆಗಳಾಗಿವೆ, ಅತ್ಯಂತ ಸುಸ್ಥಿರ ಆಹಾರಗಳಾಗಿವೆ ಎನ್ನುವುದರ ಜೊತೆಗೆ ನಿತ್ಯ ಸಿರಿಧಾನ್ಯ ಸೇವಿಸಿ ರೋಗವನ್ನು ಓಡಿಸಿ ಎಂದು ಕರೆಕೊಟ್ಟರು.

ಶ್ರೀ. ದರ್ಶನ್ ಎಂ,ಈ ವಿಜ್ಞಾನಿಗಳು (ಕೃಷಿ ವಿಸ್ತರಣೆ) ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮಾತನಾಡಿ ಸರ್ಕಾರವು 2023ವರ್ಷವನ್ನು ಅಂತರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಿಲಾಗಿದೆ ಈ ನಿಟ್ಟಿನಲ್ಲಿ ಅನೇಕ ಸಿರಿಧಾನ್ಯಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ, ಅಂತಹ ಒಂದು ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳ ಪಾಕ ಸ್ಪರ್ಧೆ/ಆಹಾರ ಮೇಳವು ಒಂದು. ಸಿರಿಧಾನ್ಯಗಳು ಅನೇಕ ತಲೆಮಾರುಗಳಿಂದ ನಮ್ಮ ಆಹಾರದ ಅವಿಭಾಜ್ಯ ಅಂಗವಾಗಿದ್ದು ಇತ್ತಿಚಿನ ದಿನಗಳವರೆಗೂ ಮರೆತು ಹೊಗಿವೆ. ಈ ನಿಟ್ಟಿನಲ್ಲಿ ಸಿರಿಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಅವಶ್ಯಕತೆಯಿದೆ, ಆದ್ದರಿಂದ ಸ್ತ್ರೀಶಕ್ತಿ ಸಂಘಗಳು ಹೆಚ್ಚು ಸಿರಿಧಾನ್ಯ ಆಧಾರಿತ ಆಹಾರ ಪಧಾರ್ಥಗಳ ಉತ್ಪಾದನೆ ಬಗ್ಗೆ ಹೆಚ್ಚು ಗಮನಕೊಡಬೇಕೆಂದು ತಿಳಿಸಿದರು.

ಡಾ. ನಿತ್ಯಶ್ರೀ, ಕೆ ವಿಜ್ಞಾನಿಗಳು (ಗೃಹ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮಾತನಾಡಿ ಸಿರಿಧಾನ್ಯಗಳಲ್ಲಿ ಪೌಷ್ಟಿಕಾಂಶಗಳ ಭಂಡಾರವೇ ಅಡಗಿದೆ ಮನುಷ್ಯನ ಆರೋಗ್ಯಕ್ಕೆ ಬೇಕಾಗಿರುವ ಎಲ್ಲಾ ಬಗೆಯ ಪೌಷ್ಟಿಕ ಸತ್ವಗಳು ಕೂಡ ಸಿರಿಧಾನ್ಯಗಳಲ್ಲಿ ಕಂಡುಬರುತ್ತದೆ, ಕೆಲವು ಸಿರಿಧಾನ್ಯಗಳಲ್ಲಿ ನಾರಿನಾಂಶ ಹೆಚ್ಚಿರುತ್ತದೆ ಇನ್ನೂ ಕೆಲವು ಧಾನ್ಯಗಳಲ್ಲಿ ಅಕ್ಕಿ ಮತ್ತು ಗೋಧಿಗಿಂತ ಹೆಚ್ಚಿನ ಕ್ಯಾಲ್ಸಿಯಂ ಮತ್ತು ಖನಿಜಗಳು ಇರುತ್ತದೆ. ಪ್ರತಿ ಧಾನ್ಯಗಳು ತನ್ನದೇ ಆದ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ವಿವಿಧ ರುಚಿ ರುಚಿಯಾದ ಸಿರಿಧಾನ್ಯಗಳ ಪಾಕಗಳು ನೋಡುಗರ ಬಾಯಲ್ಲಿ ನೀರೂರಿಸಿದವು. ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳ ಪೌಷ್ಟಿಕಾಂಶದ ಮಹತ್ವಗಳು, ಬಳಕೆಯ ವಿಧಾನಗಳು, ಆರೋಗ್ಯಕರ ಅಂಶಗಳ ಪ್ರಯೋಜನಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಯಿತು. ಜೊತೆಗೆ ರೈತರಿಗೆ ಉತ್ತಮ ಆದಾಯವನ್ನು ಪಡೆಯಲು ಸಹಾಯ ಮಾಡುವುದು ಕೂಡ ಇದರ ಉದ್ದೇಶವಾಗಿದೆ.

35 ರೈತ ಮಹಿಳೆಯರು ಭಾಗವಹಿಸಿ ಸಿರಿಧಾನ್ಯಗಳ ವಿವಿಧ ಪದಾರ್ಥಗಳಾದ ರಾಗಿ ದೋಸೆ, ರಾಗಿ ಶಾವಿಗೆ, ರಾಗಿ ಹಲ್ವ, ರಾಗಿ ಲಡ್ಡು, ರಾಗಿ ಉಪ್ಪಿಟ್ಟು, ರಾಗಿ ಹುರಿಹಿಟ್ಟು, ರಾಗಿ ಪಡ್ಡು, ರಾಗಿ ಇಡ್ಲಿ, ರಾಗಿ ಪಕೋಡ, ರಾಗಿ ಹಾಲಬಾಯಿ, ರಾಗಿ ಮಿಟಾಯಿ, ಹಾರಕದ ಖಾರ, ಹಾರಕ ಲಡ್ಡು, ಸಿರಿಧಾನ್ಯಗಳ ಹಪ್ಪಳ, ನವಣೆ ಚಕ್ಕುಲಿ, ನವಣೆ ಪಾಯಸ, ನವಣೆ ಪಲಾವ್, ಸಾಮೆ ಲಡ್ಡು ಹಾಗು ಇತರೆ ಪದಾರ್ಥಗಳನ್ನು ಪ್ರದರ್ಶನಕ್ಕೆ ಸಿದ್ಧಪಡಿಸಿ ತಂದಿದ್ದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಕೀರ್ತಿ ಪ್ರಭಾ, ನಬಾರ್ಡ್ ಡಿ.ಡಿ.ಎಮ್, ತುಮಕೂರು, ಶ್ರೀಮತಿ ಗೌರಮ್ಮ ಎನ್,ಆರ್,ಎಲ್,ಎಂ, ಅಧ್ಯಕ್ಷರು, ಹಂದನಕೆರೆ, ಶ್ರೀಮತಿ ರಂಗಮ್ಮ ಎನ್,ಆರ್,ಎಲ್,ಎಂ ಮುಖ್ಯ ಪುಸ್ತಕ ಬರಹಗಾರರು, ಲಕ್ಷ್ಮೀಕಾಂತ ಯೋಜನಾ ಸಮನ್ವಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತಿಘಟ್ಟ, ನೆಲ ಜಲ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದಂತಹ ಜ್ಞಾನೋದಯ ಮತ್ತು ಸಿಬ್ಬಂದಿ ವರ್ಗ, ಹಂದನಕೆರೆ, ಚಿಕ್ಕನಾಯನಹಳ್ಳಿ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದಂತಹ ಗಂಗಾಧರಯ್ಯ ಹಾಗು ರೈತ ಮತ್ತು ರೈತ ಮಹಿಳೆಯರು ಹಾಜರಿದ್ದರು.

## ಆಯುಷ್ ಜಾಗೃತಿ ಹಾಗೂ ಆರೋಗ್ಯಕ್ಕಾಗಿ ಅಯುರ್ವೇದ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ಆಯುಷ್ ಇಲಾಖೆ, ಸರ್ಕಾರಿ ಅರ್ಯುವೇದ ಆಸ್ಪತ್ರೆ, ಕೊನೇಹಳ್ಳಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಿಪಟೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿಯಲ್ಲಿ ರಾಷ್ಟ್ರೀಯ ಅಯುರ್ವೇದ ದಿನಾಚರಣೆ ನಿಮಿತ್ತ ಆಯುಷ್ ಜಾಗೃತಿ ಹಾಗೂ ಆರೋಗ್ಯಕ್ಕಾಗಿ ಅಯುರ್ವೇದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಆಯುಷ್ ವೈದ್ಯಾಧಿಕಾರಿ ಡಾ. ಸುಮನಾ ಮಾತನಾಡಿ ಸಮುದ್ರ ಮಥನ ಕಾಲದಲ್ಲಿ ಅಮೃತ ಕಲಶವನ್ನು ಹೊತ್ತು ತಂದ ಧನ್ವಂತರಿ ದೇವತೆ ಅರ್ಯುವೇದದ ಪ್ರವರ್ತಕರು. ಈ ದೇವತೆಯು ಅವತರಿಸಿದ ದಿನವನ್ನು ಧನ್ವಂತರಿ ಜಯಂತಿಯಾಗಿ ಆಚರಿಸುತ್ತಾ ಬರುತ್ತಿದ್ದೇವೆ. ಈ ದಿನವನ್ನು ವಿಧ್ಯುಕ್ತವಾಗಿ ರಾಷ್ಟ್ರೀಯ ಆಯುರ್ವೇದ ದಿನವಾಗಿ 2015ರಿಂದ ಆಚರಿಸುತ್ತ ಈ ಬಾರಿಯ ಎಂಟನೇ ರಾಷ್ಟ್ರೀಯ ಆಯುರ್ವೇದ ದಿನದ ನಿಮಿತ್ತ ಪ್ರತಿ ಮನೆಯಲ್ಲೂ ಪ್ರತಿಯೊಬ್ಬರಲ್ಲೂ ಆರ್ಯುವೇದ, ಆರ್ಯುವೇದ for students, public, farmer ಅಡಿಯಲ್ಲಿ ಈ ಆಯುಷ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಶ್ರೀ. ರಂಗಧಾಮರವರು, ಪ್ರಗತಿಪರ ರೈತರು, ಬರಗೂರು, ಶಿರಾ, ತಾಲ್ಲೂಕು ಇವರು ಮಾತನಾಡಿ ಅಳಿವಿನಂಚಿನಲ್ಲಿರುವ ನೈಸರ್ಗಿಕವಾಗಿ ಸಿಗುವಂತಹ ಸೊಪ್ಪುಗಳಾದ ಕೋಲಾನೆ ಸೊಪ್ಪು, ದಿನ್ನೆ ಸೊಪ್ಪು, ಕನ್ನೆ ಸೊಪ್ಪು, ಕಿರುಕಸಾಲೆ ಸೊಪ್ಪು, ಅರಿವೆ ಸೊಪ್ಪು, ಕೋಳಿಕಾಲಿನ ಸೊಪ್ಪು, ವರಗಿ ಸೊಪ್ಪು, ನುಚ್ಚುಗೋಡಿ ಸೊಪ್ಪು, ದೋಡ್ಡುಗೋನೆ ಸೊಪ್ಪು, ಅಜ್ಜಿ ಸೊಪ್ಪು (ಕಾಡ ಸಬ್ಬಸಿಗೆ ಸೊಪ್ಪು,), ಬೆಳೆಕಾಳು ಸೊಪ್ಪು, ಹಾಲೆ ಸೊಪ್ಪು, ಮುಂಗುರುಬಳ್ಳಿ ಸೊಪ್ಪು, ಅನಗೋನೆ ಸೊಪ್ಪು, ದೊಗ್ಗರೆ ಸೊಪ್ಪು, ನಗಲಿ ಸೊಪ್ಪಿನ ಬಗ್ಗೆ ಮಹತ್ವವನ್ನು ತಿಳಿಸಿದರು.




ಅದರಲ್ಲೂ ವಿಶೇಷವಾಗಿ ದೋಡ್ಡುಗೋನೆ ಸೋಪ್ಪನ್ನು ತಿಂದರೆ ಜೀರ್ಣಕ್ರಿಯೆ ಚೆನ್ನಾಗಿರುತ್ತದೆ ಹಾಗೂ ಮುಂಗುರುಬಳ್ಳಿ ಸೊಪ್ಪು ಮತ್ತು ನಗಲಿ ಸೊಪ್ಪುನ್ನು ಕಿಡ್ನಿ ಸ್ಟೋನ್‌ಗಳಿಗೆ ಬಳಸುತ್ತಾರೆ ಮತ್ತು ದೋಗ್ಗರೆ ಸೊಪ್ಪುನ್ನು ಗಾಯಗಳಿಗೆ ಬಳಸುತ್ತಾರೆ ಎಂದು ತಿಳಿಸಿದರು. ಈಗೆಲ್ಲಾ ಬಿ.ಪಿ. ಶುಗರ್ ಎಲ್ಲರಿಗೂ ಬರುವ ಸಾಮಾನ್ಯ ಕಾಯಿಲೆಯಾಗಿದೆ, ಹಸಿರು ಸೋಪ್ಪುಗಳ ಸೇವನೆಯಿಂದ ಬಿ.ಪಿ. ಶುಗರ್ ನಿವಾರಣೆ ಜೊತೆಗೆ ಕಣ್ಣಿನ ದೃಷ್ಟಿ ಸುಧಾರಣೆಗೂ ಉಪಯೋಗಕಾರಿ. ಸೊಪ್ಪಿನಲ್ಲಿ ಹೆಚ್ಚು ರಕ್ಷಣಾತ್ಮಕ ಶಕ್ತಿ ಇರುತ್ತದೆ. ಇದು ದೇಹದ ರಕ್ಷಣೆಗೆ ಬೇಕಾದ ಜೀವಸತ್ವಗಳನ್ನು ಹೇರಳವಾಗಿ ಒದಗಿಸುವುದಲ್ಲದೆ, ಖನಿಜ ಲವಣಗಳ ಗಣಿ ಎನ್ನಬಹುದಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ವಿ. ಗೋವಿಂದ ಗೌಡ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಮಾತನಾಡಿ ನಮ್ಮ ಹಿರಿಯರು ಹೆಚ್ಚಾಗಿ ಬೆಳೆಯುತ್ತಿದ್ದಿದ್ದು ಹಾಗೂ ಉಪಯೋಗಿಸುತ್ತಿದ್ದಿದ್ದು ಸಿರಿಧಾನ್ಯಗಳನ್ನು ಹಾಗಾಗಿ ಯಾವುದೇ ಖಾಯಿಲೆಗಳಿಲ್ಲದೆ ಆರೋಗ್ಯವಂತರಾಗಿರುತ್ತಿದ್ದರು ಎನ್ನುವುದರ ಜೊತೆಗೆ ಸಿರಿಧಾನ್ಯಗಳನ್ನು ಉಪಯೋಗಿಸಿ ಖಾಯಿಲೆ ಓಡಿಸಿ ಎಂದು ಕರೆ ಕೊಟ್ಟರು.

ಶ್ರೀ ಅಶೋಕ್ ಸಿ.ಡಿ.ಪಿ.ಓಂ, ತಿಪಟೂರು, ಮಾತನಾಡಿ, ಪೌಷ್ಟಿಕ ಕೈತೋಟದ ಮಹತ್ವ ಹಾಗೂ ಅದರ ಪ್ರಯೋಜನಗಳನ್ನು ತಿಳಿಸಿದರು.

ಡಾ. ನಿತ್ಯಶ್ರೀ, ಕೆ. ವಿಜ್ಞಾನಿ (ಗೃಹ ವಿಜ್ಞಾನ) ಮಾತನಾಡಿ ಆರೋಗ್ಯದಲ್ಲಿ ಸಿರಿಧಾನ್ಯಗಳ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಕೆ.ವಿ.ಕೆ ವಿಜ್ಞಾನಿಗಳಾದ ದರ್ಶನ್, ಡಾ. ಕೀರ್ತಿಶಂಕರ್, ಡಾ. ತಸ್ಮೀಯಾ ಕೌಸರ್, ಮನೋಜ್ ಹಾಗೂ ಸಿಬ್ಬಂದಿ ವರ್ಗ, ಶ್ರೀಮತಿ ಪ್ರೇಮ, ಬಿ.ಎನ್. ಮೇಲ್ವಿಚಾರಕರು, ಯೋಗಾನಂದಮೂರ್ತಿ, ಅಂಗನವಾಡಿ ಕಾರ್ಯಕರ್ತೆಯರು, ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

## ಮೆಣಸಿನಕಾಯಿ ಬೆಳೆಯುವ ರೈತರಿಗೆ ಅರ್ಕಾ ಗಗನ್ ತಳಿ ವರದಾನ

ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಮೆಣಸಿನಕಾಯಿಯ ನೂತನ ತಳಿಯಾದ ಅರ್ಕ ಗಗನ್ ಕುರಿತು ತಿಪಟೂರು ತಾಲ್ಲೂಕಿನ ಪರುವಗೊಂಡನಹಳ್ಳಿ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಯಿತು.



ಕೇಂದ್ರದ ತೋಟಗಾರಿಕಾ ವಿಜ್ಞಾನಿಗಳಾದ ಡಾ. ಕೀರ್ತಿಶಂಕರ್ ಕೆ.,ರವರು ಮಾತನಾಡಿ ಅರ್ಕ ಗಗನ್ ತಳಿಯನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರ, ಹೆಸರಘಟ್ಟ, ಬೆಂಗಳೂರು ರವರು ಬಿಡುಗಡೆ ಮಾಡಿದ್ದು, ಈ ತಳಿಯು ಹಸಿರು ಮೆಣಸಿನಕಾಯಿಗೆ ಸೂಕ್ತವಾಗಿದೆ, ಮತ್ತು ಎಕೆರೆಗೆ ಸುಮಾರು 80–100 ಕ್ವಿ ರವರೆಗೂ ಇಳುವರಿಯನ್ನು ಪಡೆಯಬಹುದು ಎಂದು ಕರೆಕೊಟ್ಟರು.

ರೈತರಾದ ಶ್ರೀ ಧನಂಜಯ್‌ರವರು ಮಾತನಾಡಿ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಮುಂಚೂಣಿ ಕ್ಷೇತ್ರ ಪ್ರಾತ್ಯಕ್ಷಿಕೆಯಡಿಯಲ್ಲಿ ಅರ್ಕಾ ಗಗನ್ ತಳಿಯ ಸಸಿಗಳನ್ನು ನೀಡಲಾಯಿತು. ಕೇಂದ್ರದ ತೋಟಗಾರಿಕಾ ವಿಜ್ಞಾನಿಗಳಾದ ಡಾ. ಕೀರ್ತಿಶಂಕರ್ ಕೆ.,ರವರ ಸಲಹೆಯಂತೆ ನಾಟಿ ಮಾಡಿದ ತಿಂಗಳ ನಂತರ ತರಕಾರಿ ಸ್ಪೆಷಲ್ ಲಘು ಪೋಷಕಾಂಶವನ್ನು ಪ್ರತೀ ಲೀಟರ್ ನೀರಿಗೆ 5ಗ್ರಾಂ ನಂತೆ ಮಿಶ್ರಣ ಮಾಡಿ ಸಿಂಪಡಿಸಿದೆವು ಮತ್ತು ಹೂ ಬಿಡುವ ಸಮಯದಲ್ಲಿ ಎನ್. ಎ. ಎ. ಬೆಳೆ ಪ್ರಚೋದಕವನ್ನು ಸಿಂಪಡಣೆ ಮಾಡಿದ್ದರಿಂದ ಉತ್ತಮ ಗುಣಮಟ್ಟ ಮತ್ತು ಅಧಿಕ ಇಳುವರಿಯನ್ನು ಪಡೆದಿದ್ದೇವೆ ಎಂದು ತಿಳಿಸಿಕೊಟ್ಟರು.

ಮುಂದುವರೆದು ರೈತರಾದ ಶ್ರೀ ರೇಣುಕಮೂರ್ತಿರವರು ಮಾತನಾಡಿ ಸಾಮಾನ್ಯವಾಗಿ ನಾವು ಸ್ಥಳೀಯ ತಳಿಯನ್ನು ಬೆಳೆಯುತ್ತಿದ್ದು ಕಡಿಮೆ ಇಳುವರಿಯನ್ನು ಪಡೆಯುತ್ತಿದ್ದೆವು. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಅರ್ಕಾ ಗಗನ್ ತಳಿಯನ್ನು ಪರಿಚಯಿಸಿದ್ದರಿಂದ ಅಧಿಕ ಇಳುವರಿ ಮತ್ತು ಉತ್ತಮ ಆದಾಯವನ್ನು ಪಡೆದಿದ್ದೇವೆ ಎಂದು ತಿಳಿಸಿಕೊಟ್ಟರು.ಕ್ಷೇತ್ರೋತ್ಸವದಲ್ಲಿ ಸುಮಾರು 45 ಕ್ಕೂ ಹೆಚ್ಚು ರೈತರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## ನವಣೆ ಬೆಳೆ SiA–3159 ತಳಿಯ ಕ್ಷೇತ್ರೋತ್ಸವ

ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ಇವರ ವತಿಯಿಂದ ನವಣೆ ತಳಿ SiA–3159 ಕುರಿತು ತಿಪಟೂರು ತಾಲ್ಲೂಕಿನ ಪರುವಗೊಂಡನಹಳ್ಳಿಯಲ್ಲಿ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಗೃಹ ವಿಜ್ಞಾನಿಗಳಾದ ಡಾ. ನಿತ್ಯಶ್ರೀ, ಕೆ ಮಾತನಾಡಿ, ಮಾತನಾಡಿ ಕರ್ನಾಟಕ ರಾಜ್ಯವು ಸಿರಿಧಾನ್ಯಗಳ ಬೆಳೆಗಳಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದಾಗಿದ್ದು ಪ್ರಸ್ತುತ ಈ ವರ್ಷ ಅಂತರಾಷ್ಟ್ರೀಯ ಸಿರಿಧಾನ್ಯಗಳ ವರ್ಷ ಆಚರಿಸುತ್ತಿದ್ದು, ಇದರ ಭಾಗವಾಗಿ ಜನಗಳಲ್ಲಿ ಸಿರಿಧಾನ್ಯಗಳ ಬಳಕೆಯನ್ನು ಹೆಚ್ಚಿಸುವ ಮೂಲಕ ಬೆಳೆಯನ್ನು ಉತ್ತೇಜಿಸಲು, ಮಕ್ಕಳು ಮತ್ತು ಯುವಕರಲ್ಲಿ ಸಿರಿಧಾನ್ಯಗಳ ಬಳಕೆಯ ಅರಿವು ಮೂಡಿಸಲು ಹಾಗೂ ರೈತರಿಗೆ ಈ ಅತಿವೃಷ್ಟಿ ಹಾಗೂ ಅನಾವೃಷ್ಟಿ ಸಮಯದಲ್ಲಿ ಆದಾಯವನ್ನು ಪಡೆಯಲು ಸಹಾಯಕವಾಗಲೆಂದು ಕೆ,ವಿ.ಕೆ ವತಿಯಿಂದ ನೂತನ ಹಾಗೂ ಸುಧಾರಿತ ನವಣೆ ಬೆಳೆಯ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಂಡಿದ್ದೇವೆ ಎನ್ನುವುದರ ಜೋತೆಗೆ ಜೋಳ, ಸಜ್ಜೆ, ರಾಗಿ, ಬರಗು, ನವಣೆ, ಹಾರಕ, ಸಾಮೆ, ಕೊರಲೆ, ಊದಲು ಸಿರಿಧಾನ್ಯಗಳಾಗಿ ಗುರುತಿಸಿಕೊಂಡಿದೆ. ಈ ಧಾನ್ಯಗಳು ಬಣ್ಣದಲ್ಲಿ ವ್ಯತ್ಯಾಸವಿದ್ದರೂ ಆಕಾರದಲ್ಲಿ ಸಾಮ್ಯತೆ ಇರುತ್ತದೆ. ಕೆಲವು ಸಿರಿಧಾನ್ಯಗಳಲ್ಲಿ ನಾರಿನಂಶ ಹೆಚ್ಚಿದ್ದರೆ. ಇನ್ನು ಕೆಲವು ಧಾನ್ಯಗಳಲ್ಲಿ ಅಕ್ಕಿ, ಗೋಧಿಗಿಂತ ಹೆಚ್ಚಿನ ಕ್ಯಾಲ್ಸಿಯಂ ಮತ್ತು ಖನಿಜಗಳಿರುತ್ತವೆ. ಪ್ರತಿ ಧಾನ್ಯಗಳು ತನ್ನದೇ ಆದ ಆರೋಗ್ಯ ಪ್ರಯೋಜನಗಳನ್ನು ಹೊಂದಿರುತ್ತವೆ. ಜೊತೆಗೆ ನವಣೆಯು ಪೋಷಕಾಂಶಗಳ ಸಮೃದ್ಧಿ ಮೂಲವಾಗಿದೆ ಎಂದು ತಿಳಿಸಿಕೊಟ್ಟರು.

ರೈತರಾದ ಶ್ರೀ ಧನಂಜಯ್‌ರವರು ಮತ್ತು ರೇಣುಕಮೂರ್ತಿರವರು ಮಾತನಾಡಿ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ವತಿಯಿಂದ ಮುಂಚೂಣಿ ಪ್ರಾತ್ಯಕ್ಷಿಕೆಯಡಿಯಲ್ಲಿ ನವಣೆ ತಳಿ SiA–3159 ಬೀಜಗಳನ್ನು ನೀಡಲಾಯಿತು.



ನವಣೆಯಂತಹ ಕಿರಿಧಾನ್ಯಗಳು ಕೀಟ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಕಡಿಮೆ ಫಲವತ್ತಾದ ಹೊಲಗಳಲ್ಲೂ ಸುಲಭವಾಗಿ ಬೆಳೆಯಬಹುದು ಮತ್ತು ಕಡಿಮೆ ಮಳೆಯಲ್ಲಿಯೂ ಬೆಳೆಯಬಲ್ಲದು ಎಂದು ಅವರ ಅನಿಸಿಕೆಯನ್ನು ಹಂಚಿಕೊಂಡರು.

ಕ್ಷೇತ್ರೋತ್ಸವದಲ್ಲಿ ಸುಮಾರು 45 ಕ್ಕೂ ಹೆಚ್ಚು ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು.

# ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಮಣ್ಣು ದಿನಾಚರಣೆ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ಇಫ್ಕೋ ಲಿಮಿಟೇಡ್ ಹಾಗೂ ಜುವಾರಿ ಅಗ್ರೋಕೆಮಿಕಲ್ಸ್ ಸಹಯೋಗದೊಂದಿಗೆ ಕೆವಿಕೆ ಆವರಣದಲ್ಲಿ ಮಂಗಳವಾರ ವಿಶ್ವ ಮಣ್ಣು ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮವನ್ನು ಚಿಂದಬರ್ ಮೂರ್ತಿ ಕುಲಕರ್ಣಿ ಕ್ಷೇತ್ರ ಅಧಿಕಾರಿಗಳು, ಚಿತ್ರದುರ್ಗ ಹಾಗೂ ಕಿರಣ್ ಕುಮಾರ್, ಜುವಾರಿ ಅಗ್ರೋಕೆಮಿಕಲ್ಸ್ ತುಮಕೂರು ಉದ್ಘಾಟಿಸಿದರು. ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರ ವಿಜ್ಞಾನಿಯಾದ ಡಾ. ತಸ್ಮಿಯಾ ಕೌಸರ್ ರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ವಿಶ್ವ ಮಣ್ಣು ದಿನವನ್ನು ಪ್ರಪಂಚದಾದ್ಯಂತ 2023 ರಲ್ಲಿ "ಮಣ್ಣು ಮತ್ತು ನೀರು: ಜೀವನದ ಮೂಲ" ಎನ್ನುವ ಶೀರ್ಷಿಕೆಯಡಿ ಆಚರಿಸಲಾಗುತ್ತಿದೆ. ಮನುಷ್ಯನಿಗೆ ಬೇಕಾಗುವ ಶೇ. 95 ರಷ್ಟು ಆಹಾರ ಮಣ್ಣಿನಿಂದ ಬರುವುದು ಜೊತೆ ಸಸ್ಯಗಳಿಗೆ ಬೇಕಾದ 18 ನೈಸರ್ಗಿಕ ಪೋಷಕಾಂಶಗಳಲ್ಲಿ ಮಣ್ಣು 15 ಪೋಷಕಾಂಶಗಳನ್ನು ಪೂರೈಸಿ ಗುಣಮಟ್ಟದ ಆಹಾರ ಉತ್ಪಾದನೆಗೆ ಸಹಕರಿಸುತ್ತದೆ. ತಡಸೂರು ಗ್ರಾಮದ ಆರ್ಥಿಕ ಸಮಲೋಚರಾದ ಶ್ರೀಮತಿ ಪಿ ರೇಖಾ ರವರು ಮಾತನಾಡುತ್ತಾ ಮಣ್ಣಿನ ವಿವಿಧ ವಿಧಗಳು, ಮಣ್ಣಿಗೆ ಅನುಗುಣವಾಗಿ ಬೆಳೆಯಬಹುದಾದ ವಿವಿಧ ಬೆಳೆಗಳು ಮತ್ತು ಮಣ್ಣಿನ ಸಂರಕ್ಷಣೆಯ ಮಹತ್ವದ ಬಗ್ಗೆ ತಿಳಿಸಿದರು. ಮಣ್ಣಿನ ಸಂರಕ್ಷಣೆಯು ನಮ್ಮೆಲ್ಲರ ಹೊಣೆಯಾಗಿದ್ದು, ನಾವೆಲ್ಲ ಜಾಗುರುಕತೆಯಿಂದ ಮಣ್ಣಿನ ಸಂರಕ್ಷಣೆ ಮಾಡಬೇಕೆಂದು ತಿಳಿಸಿದರು.

ಶ್ರೀ ಪಿ ಚಿಂದಬರ್ ಮೂರ್ತಿ ಕುಲಕರ್ಣಿ, ಕ್ಷೇತ್ರ ಅಧಿಕಾರಿಗಳು ಇಫ್ಕೋ ಲಿಮಿಟೇಡ್ ಚಿತ್ರದುರ್ಗ ಇವರು ಕೃಷಿಯಲ್ಲಿ ನ್ಯಾನೋ ಗೊಬ್ಬರ ಬಳಕೆಯಿಂದ ಶೇ. 25 ರಷ್ಟು ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡಿ ಹೆಚ್ಚು ಇಳುವರಿಯನ್ನು ಪಡೆಯಬಹುದು ಎಂದರು. ಇತ್ತೀಚಿನ ದಿನಗಳಲ್ಲಿ ಕೇವಲ ಒಂದು ಅಥವಾ ಎರಡು ರೀತಿಯ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಹಲವು ಪೋಷಕಾಂಶಗಳ ಕೊರತೆ ಮಣ್ಣಿನಲ್ಲಿ ಉಂಟಾಗಿರುವುದರಿಂದ ಗುಣಮಟ್ಟದ ಆಹಾರ ಉತ್ಪಾದನೆ ಸಾದ್ಯವಾಗುತ್ತಿಲ್ಲ. ಇದರಿಂದಾಗಿ ಬೆಳೆಗಳು ಹಲವು ಕೀಟ ಮತ್ತು ರೋಗಗಳ ಹಾವಳಿಗೆ ತುತ್ತಾಗುವುದರ ಮೂಲಕ ಇಳುವರಿ ಕಡಿಮೆಯಾಗುತ್ತಿದೆ ಎಂದು ತಿಳಿಸಿದರು.

ಕಿರಣ್ ಕುಮಾರ್ ಸಹಾಯಕ ವ್ಯವಸ್ಥಾಪಕರು ಜುವಾರಿ ಅಗ್ರೋಕೆಮಿಕಲ್ಸ್ ತುಮಕೂರು, ಇವರು ಕೃಷಿಯಲ್ಲಿ ಜುವಾರಿ ಸಂಸ್ಥೆಯ ಹೊಸ ಉತ್ಪನ್ನಗಳ ಪರಿಚಯ ಮಾಡಿಕೊಟ್ಟರು

ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ವಿ. ಗೋವಿಂದ ಗೌಡ ಮಾತನಾಡುತ್ತ ವಿಶ್ವ ಮಣ್ಣು ದಿನದ ಹಿನ್ನೆಲೆ, ಮಣ್ಣಿನ ಮಹತ್ವ ಮತ್ತು ಮಣ್ಣಿನ ಸಾವಯವ ಇಂಗಾಲ ಹೇಗೆ ಹೆಚ್ಚಿಸಬಹುದು ಎಂದು ವೈಜ್ಞಾನಿಕವಾಗಿ ತಿಳಿಸಿಕೊಟ್ಟರು. ಮಣ್ಣು ಮತ್ತು ನೀರು ಇವೆರಡೂ ಪ್ರಮುಖ ನೈಸರ್ಗಿಕ ಸಂಪನ್ಮೂಲಗಳಾಗಿವೆ.

ಮಣ್ಣಿನ ಸಂರಕ್ಷಣೆ ನಮ್ಮಲ್ಲರ ಹೊಣೆ ಮಣ್ಣು ನಾಗರೀಕತೆಯ ಮೂಲ, ಹಸಿರೆಲೆ ಗೊಬ್ಬರಗಳ ಬಳಕೆ, ಜೈವಿಕ ಗೊಬ್ಬರಗಳ ಬಳಕೆ, ಮಿಶ್ರ ಬೆಳೆ ಪದ್ಧತಿ, ಸಾವಯವ ಗೊಬ್ಬರಗಳ ಬಳಕೆ, ಸೂಕ್ತ ಪ್ರಮಾಣದಲ್ಲಿ ರಸಗೊಬ್ಬಗಳ ಸಮತೋಲಿತ ಬಳಕೆಯನ್ನು ಅಳವಡಿಸಿಕೊಳ್ಳುವುದರಿಂದ ಗುಣಮಟ್ಟದ ಉತ್ಪಾದನೆ ಮಾಡಬಹುದೆಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಮಣ್ಣು ಮಾದರಿ ತೆಗೆಯುವ ಪದ್ಧತಿ ಪ್ರಾತ್ಯಕ್ಷಿಕೆ ಮಾಡಲಾಯಿತು ಹಾಗೂ ಹಾಗೂ ಕಾರ್ಯಕ್ರಮದ ಅಂಗವಾಗಿ ಮಣ್ಣು ಆರೋಗ್ಯ ಚೀಟಿಯನ್ನು ರೈತರಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಶರತ್ ಜೈ ಕಿಸಾನ್ ಕೃಷಿ ಸಲಹೆಗಾರರು, ಜುವಾರಿ ತುಮಕೂರು, ಶ್ರೀ ಶಿವಣ್ಣ, ಸ್ಪೇಷಾಲಿಟಿ ಫರ್ಟಿಲೈಸರ್ ಅಸಿಸ್ಟೆಂಟ್, ಇಫ್ಕೋ ಲಿಮಿಟೆಡ್, ತುಮಕೂರು, ಶ್ರೀ ಮಹೇಶ್, ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು, ಆತ್ಮ ಯೋಜನೆ, ಕೃಷಿ ಇಲಾಖೆ ತಿಪಟೂರು ಹಾಗೂ ಕೇಂದ್ರದ ವಿಜ್ಞಾನಿಗಳಾದ ಡಾ. ಮನೋಜ್, ಹೆಚ್., ಡಾ. ನಿತ್ಯಶ್ರೀ ಕೆ., ಶ್ರೀ ದರ್ಶನ್ ಎಂ. ಈ., ಡಾ. ಕೀರ್ತಿಶಂಕರ್ ಹಾಗೂ ಕೇಂದ್ರದ ಸಿಬ್ಬಂದಿಗಳಾದ ಶ್ರೀ ಶಮಾ ನಾಜ್, ಮಲ್ಲಿಕಾರ್ಜುನಯ್ಯ, ರುದ್ರೇಶ್ ಮತ್ತು 60 ಜನ ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿದರು.

# ತರಬೇತಿ ಕಾರ್ಯಕ್ರಮಗಳು

## ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ಸಿರಿಧಾನ್ಯಗಳ ಮಹತ್ವ ಮತ್ತು ಬೆಟ್ಟದನೆಲ್ಲಿ ಹಾಗೂ ಕರೋಂಡ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | 08/10/2023 | 23 |
| 2 | ಹಾಲಿನ ಉತ್ಪನ್ನಗಳ ತರಬೇತಿ ಕಾರ್ಯಕ್ರಮ | 07/10/2023 | 36 |
| 3 | ತೋಟಗಾರಿಕಾ ಬೆಳೆಗಳಲ್ಲಿ ವಿವಿಧ ನೀರಾವರಿ ಪದ್ಧತಿಗಳ ಕುರಿತು ತರಬೇತಿ ಕಾರ್ಯಕ್ರಮ | 02/11/2023 | 31 |
| 4 | ತೆಂಗಿನ ಬೇಸಾಯದ ಸಂಕ್ಷಿಪ್ತ ನೋಟ ಮತ್ತು ಕೈಗಾರಿಕೆ | 04/11/2023 | 57 |
| 5 | ತೋಟಗಾರಿಕೆ ಬೆಳೆಗಳಿಗೆ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ | 06/11/2023 | 20 |
| 6 | ಆಯುಷ್ ಜಾಗೃತಿ ಕಾರ್ಯಕ್ರಮ | 09/11/2023 | 50 |
| 7 | ತೋಟಗಾರಿಕೆ ಬೆಳೆಗಳಿಗೆ ಸಮಗ್ರ ನೀರು ನಿರ್ವಹಣೆ | 22/12/2023 | 37 |

## ಹೊರ ಅವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಪೌಷ್ಟಿಕ ಕೈತೋಟ ಮತ್ತು ತರಕಾರಿ ಬೆಳೆಗಳಲ್ಲಿ ತರಕಾರಿ ಸ್ಪೆಷಲ್ ಮಹತ್ವ | ಪರುವಗೊಂಡನಹಳ್ಳಿ | 05/10/2023 | 15 |
| 2 | ಬೆಟ್ಟದ ನೆಲ್ಲಿಕಾಯಿ ಉಪಯೋಗಗಳು, ಮೌಲ್ಯವರ್ಧನೆ ಮತ್ತು ಬೆಟ್ಟದ ನೆಲ್ಲಿಕಾಯಿ ಕ್ಯಾಂಡಿ ಪದ್ಧತಿ ಪ್ರಾತ್ಯಕ್ಷಿಕೆ | ಪರುವಗೊಂಡನಹಳ್ಳಿ | 17/10/2023 | 40 |
| 3 | ಮಣ್ಣು ಮಾದರಿ ಮತ್ತು ಮಣ್ಣಿನ ಆರೋಗ್ಯ ಚೀಟಿಯ ಮಹತ್ವ | ಪರುವಗೊಂಡನಹಳ್ಳಿ | 17/10/2023 | 14 |
| 4 | ಹರಳು ಬೆಳೆಯಲ್ಲಿ ಸಮಗ್ರ ಬೇಸಾಯ ಪದ್ಧತಿ | ಕೊತ್ತಗೆರೆ | 20/10/2023 | 26 |
| 5 | ತೆಂಗು ಹಾಗೂ ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ಪರುವಗೊಂಡನಹಳ್ಳಿ | 07/11/2023 | 25 |
| 6 | ಪೌಷ್ಟಿಕ ಕೈತೋಟದ ಸಸಿಗಳ ವಿತರಣೆ ಕಾರ್ಯಕ್ರಮ | ಪರುವಗೊಂಡನಹಳ್ಳಿ | 10/11/2023 | 20 |
| 7 | ತೆಂಗಿನಲ್ಲಿ ಕೀಟ ಮತ್ತು ರೋಗ ಭಾದೆ | ಪನ್ನಸಮುದ್ರ | 24/11/2023 | 28 |
| 8 | ಸಾಮೆಯಲ್ಲಿ ಮೌಲ್ಯವರ್ಧಿತ ಉತ್ಪನ್ನಗಳ ಪದ್ದತಿ ಪ್ರಾತ್ಯಕ್ಷಿಕೆ | ಪರುವಗೊಂಡನಹಳ್ಳಿ | 04/12/2023 | 25 |
| 9 | ತೋಟಗಾರಿಕಾ ಬೆಳೆಗಳಲ್ಲಿ ಹನಿ ನೀರಾವರಿ ಪದ್ಧತಿ | ದೇವಿಹಳ್ಳಿ | 06/12/2023 | 38 |
| 10 | ತೆಂಗು ಮತ್ತು ಹುಣಸೆ ಹಣ್ಣಿನಲ್ಲಿ ಮೌಲ್ಯವರ್ಧನೆ ಕುರಿತು | ತಡಸೂರು | 08/12/2023 | 14 |
| 11 | ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಪಂದನೆ | ಗೋಡೆಕೆರೆ | 28/12/2023 | 29 |

## ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮ

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಹಿಂಗಾರು ಬೆಳೆಗಳಲ್ಲಿ ಸುಧಾರಿತ ಬೇಸಾಯ ಕ್ರಮಗಳು ಮತ್ತು ಹವಮಾನ ಆಧಾರಿತ ಕೃಷಿ ಮಾಹಿತಿಹಳು | ಕೆ.ವಿ.ಕೆ., ತಿಪಟೂರು | 27/11/2023 | 09 |
| 2 | ವಿವಿಧ ಇಲಾಕೆಯ ಮುಂಚೂಣಿ ಕಾರ್ಯಕರ್ತರಿಗೆ " ವೈಜ್ಞಾನಿಕ ಅಣಬೆ ಬೇಸಾಯ ಪದ್ಧತಿ ಮತ್ತು ಮೌಲ್ಯವರ್ಧನೆ ಕಾರ್ಯಕ್ರಮ" | ಕೆ.ವಿ.ಕೆ., ತಿಪಟೂರು | 22/12/2023 | 101 |

## ಪ್ರಾಯೋಜಿತ ತರಬೇತಿಗಳು

| ಕ್ರ.ಸಂ. | ವಿಷಯ | ಪ್ರಯೋಜಿತ ಸಂಸ್ಥೆ | ದಿನಾಂಕ | ಒಟ್ಟು |
|---|---|---|---|---|
| 1 | ಕೃಷಿ ಸಖಿ ಬ್ಯಾಚ್ 8 | ಸಂಜೀವಿನಿ ಸಂಸ್ಥೆ, ಬೆಂಗಳೂರು | 02/102023 – 07/102023 | 36 |
| 2 | ನರ್ಸರಿ ನಿರ್ವಹಣೆ | ಮ್ಯಾನೇಜ್, ಹೈದರಾಬಾದ್ | 16/10/2023 – 21/10/2023 | 15 |
| 3 | ಗ್ಲೈಫೋಸೇಟನ್ ಸುರಕ್ಷಿತ ಮತ್ತು ವಿವೇಚನಾಯುಕ್ತ ಬಳಕೆ | ಎನ್.ಐ.ಪಿ.ಹೆಚ್.ಎಮ್, ಹೈದರಾಬಾದ್ | 06/12/2023 | 56 |

## ಪ್ರಮುಖ ದಿನಗಳು / ಕಾರ್ಯಕ್ರಮಗಳು ಹಾಗೂ ಕ್ಷೇತ್ರೋತ್ಸವಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಸುಸ್ಥಿರ ಆಹಾರ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಸಿರಿಧಾನ್ಯಗಳ ಉತ್ತೇಜಿಸುವ ಕಾರ್ಯಗಾರ | ಕೆ.ವಿ.ಕೆ., ತಿಪಟೂರು | 04/10/2023 | 201 |
| 2 | ಮಹಿಳಾ ಕಿಸಾನ್ ದಿವಸ್ ಮತ್ತು ವಿಶ್ವ ಆಹಾರ ದಿನಾಚಾರಣೆ – 2023 ಹಾಗೂ ಸ್ವಚ್ಚತಾ ಅಭಿಯಾನ | ಪರುವಗೊಂಡನಹಳ್ಳಿ, ತಿಪಟೂರು | 16/10/2023 | 51 |
| 3 | ತೆಂಗಿನಲ್ಲಿ ಹೆಚ್ಚುವರಿ ಉತ್ಪಾದನೆ, ಸಾವಯವ ಕೃಷಿ ಕೀಟ ಮತ್ತು ರೋಗಗಳ ಹತ್ತೋಟಿ ಕ್ರಮ, ಮೌಲ್ಯವರ್ಧನೆ ಮಿಶ್ರ ಬೇಸಾಯ ಪದ್ಧತಿ ಮತ್ತು ಯಂತ್ರೀಕರಣ | ಬುಕ್ಕಸಾಗರ, ಕುಣಿಗಲ್ | 27/10/2023 | 98 |
| 4 | ಪಿ ಎಂ ಸಮ್ಮನ್ ನಿಧಿ ಕಾರ್ಯಕ್ರಮ | ಕೆ.ವಿ.ಕೆ., ತಿಪಟೂರು | 15/11/2023 | 52 |
| 5 | ವಿಶ್ವ ಮಣ್ಣು ದಿನಾಚಾರಣೆ – 2023 | ಕೆ.ವಿ.ಕೆ., ತಿಪಟೂರು | 05/12/2023 | 50 |
| 6 | ರೈತ ದಿನಾಚಾರಣೆ | ಕೆ.ವಿ.ಕೆ., ತಿಪಟೂರು | 23/12/2023 | 32 |

## ಪ್ರಾಯೋಜಿತ ತರಬೇತಿಗಳು

| ಕ್ರ. ಸಂ. | ದಿನಾಂಕ | ಸ್ಥಳ | ವಿಷಯ | ರೈತರ ಸಂಖ್ಯೆ |
|---|---|---|---|---|
| 1 | 07/10/2023 | ಹುಲಿವಾನ | ಅಡಿಕೆ ಮತ್ತು ತೆಂಗಿನಲ್ಲಿ ಅಂತರ ಬೆಳೆ | 04 |
| 2 | 10/10/2023 | ಗೌಡನಕಟ್ಟೆ | ತರಕಾರಿ ಗಿಡಗಳಲ್ಲಿ ಹಣ್ಣು ಹುಳು ತಾಕಿಗೆ ಕ್ಷೇತ್ರ ಭೇಟಿ | 8 |
| 3 | 18/10/2023 | ತಿಪಟೂರು | ನರ್ಸರಿಯಲ್ಲಿ ಎ.ಎಂ.ಸಿ ಬಳಕೆ ಮತ್ತು ರೋಗ, ಕೀಟಗಳ ನಿರ್ವಹಣೆ | 05 |
| 4 | 19/10/2023 | ನಾಗರಘಟ್ಟ | ದಾಳಿಂಬೆಯಲ್ಲಿ ಸೊರಗು ರೋಗ ತಾಕಿಗೆ ಕ್ಷೇತ್ರ ಭೇಟಿ | 10 |
| 5 | 07/11/2023 | ಕರೀಕೆರೆ | ರೇಷ್ಮೆಯಲ್ಲಿ ಹೂಜಿ ಹುಳು ಮತ್ತು ಥ್ರಿಪ್ಸ್ ತಾಕಿಗೆ ಕ್ಷೇತ್ರ ಭೇಟಿ | 7 |
| 6 | 10/11/2023 | ಪರುವಗೊಂಡನಹಳ್ಳಿ | ಮೆಣಸಿನಕಾಯಿ ಬೆಳೆಯಲ್ಲಿ ಹೂ ಉದುರುವಿಕೆ | 08 |
| 7 | 11/11/2023 | ಪರುವಗೊಂಡನಹಳ್ಳಿ | ರಾಗಿನಲ್ಲಿ ಬೇರು ತಿಗಣೆ ಮತ್ತು ತೆಂಗಿನಲ್ಲಿ ಅಣಬೆ ರೋಗ | 10 |
| 8 | 22/11/2023 | ನೊಣವಿನಕೆರೆ | ಹಕಳಿನಲ್ಲಿ ಕಾಲು ಬಾಯಿ ರೋಗ | 5 |
| 9 | 25/11/2023 | ಹೊನ್ನವಳ್ಳಿ | ಬಾಳೆ ಬೆಳೆಯಲ್ಲಿ ಲಘು ಪೋಷಕಾಂಶಗಳ ಕೊರತೆ | 05 |
| 10 | 29/11/2023 | ಚಿ.ನಾ. ಹಳ್ಳಿ | ಅಡಿಕೆಯಲ್ಲಿ ಕಾಯಿ ಸೀಳುವಿಕೆ ಕುರಿತು ಕ್ಷೇತ್ರ ಬೇಟಿ | 6 |
| 11 | 29/11/2023 | ಯಳನಾಡು | ತೆಂಗಿನಲ್ಲಿ ಅಂತರ ಬೆಳೆಯಾಗಿ ಬಾಳೆ ಮತ್ತು ತೆಂಗಿನಲ್ಲಿ ಕಾಯಿ ಉದುರುವ ಸಮಸ್ಯೆ | 04 |
| 12 | 05/12/2023 | ಪತ್ರೇಹಳ್ಳಿ | ದಾಳಿಂಬೆಯಲ್ಲಿ ಸೊರಗು ರೋಗ | 07 |
| 13 | 13/12/2023 | ಪರುವಗೊಂಡನಹಳ್ಳಿ | ತೆಂಗಿನಲ್ಲಿ ನುಸಿ ರೋಗ | 08 |
| 14 | 21/12/2023 | ಹಂದನಕೆರೆ | ತೆಂಗಿನಲ್ಲಿ ಕೆಂಪು ಮೂತಿ ಹುಳು ತಾಕಿಗೆ ಕ್ಷೇತ್ರ ಬೇಟಿ | 3 |
| 15 | 27/12/2023 | ಮಾದೀಹಳ್ಳಿ, | ಸೀಬೆಯಲ್ಲಿ ರೆಂಬೆಗಳ ಸವರುವಿಕೆ ಮತ್ತು ಪೋಷಕಾಂಶಗಳ ನಿರ್ವಹಣೆ | 03 |

## ಪದ್ದತಿ ಪ್ರಾತ್ಯಕ್ಷಿಕೆ

| ಕ್ರ.ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 07/10/2023 | ಹಾಲಿನ ಉತ್ಪನ್ನಗಳ ತರಬೇತಿ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ, ಕೊನೇಹಳ್ಳಿ | 36 |
| 2 | 08/10/2023 | ಸಿರಿಧಾನ್ಯಗಳು, ಬೆಟ್ಟದನೆಲ್ಲಿ ಹಾಗೂ ಕರೋಂಡ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ, ಕೊನೇಹಳ್ಳಿ | 23 |
| 3 | 17/10/2023 | ತೊಗರಿಯಲ್ಲಿ ಪಲ್ಸ್ ಮ್ಯಾಜಿಕ್ ಸಿಂಪರಣೆ | ಹಂದನಕೆರೆ | 20 |
| 4 | 17/10/2023 | ಬೆಟ್ಟದ ನೆಲ್ಲಿಕಾಯಿ ಮೌಲ್ಯವರ್ಧನೆ ಪದ್ಧತಿ ಪ್ರಾತ್ಯಕ್ಷಿಕೆ | ಪರುವಗೊಂಡನಹಳ್ಳಿ | 40 |
| 5 | 17/10/2023 | ಮಣ್ಣು ಮಾದರಿ ಪದ್ಧತಿ ಪ್ರಾತ್ಯಕ್ಷಿಕೆ ಮತ್ತು ಮಣ್ಣಿನ ಆರೋಗ್ಯ ಚೀಟಿಯ ಮಹತ್ವ | ಪರುವಗೊಂಡನಹಳ್ಳಿ | 14 |
| 6 | 07/11/2023 | ತೆಂಗು ಹಾಗೂ ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ಪರುವಗೊಂಡನಹಳ್ಳಿ | 25 |
| 7 | 14/11/2023 | ಮೆಣಸಿನಕಾಯಿ ಬೆಳೆಯಲ್ಲಿ ತರಕಾರಿ ಸ್ಪೇಷಲ್ ಸಿಂಪರಣೆ | ಪರುವಗೊಂಡನಹಳ್ಳಿ | 10 |
| 8 | 15/11/2023 | ತೊಗರಿಯಲ್ಲಿ ಮೋಹಕ ಬಲೆ ಅಳವಡಿಕೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಹಂದನಕೆರೆ | 15 |
| 9 | 04/12/2023 | ಸಾಮೆಯಲ್ಲಿ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ಪರುವಗೊಂಡನಹಳ್ಳಿ | 25 |
| 10 | 08/12/2023 | ತೆಂಗು ಮತ್ತು ಹುಣಸೆ ಹಣ್ಣಿನಲ್ಲಿ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ತಡಸೂರು | 14 |
| 11 | 04/01/2024 | ಮಾವಿನ ಬೆಳೆಯಲ್ಲಿ ಮಾವು ಸ್ಪೇಷಲ್ ಸಿಂಪರಣೆ ಮತ್ತು ಹಣ್ಣಿನ ನೊಣದ ನಿರ್ವಹಣೆಗೆ ಮೋಹಕ ಬಲೆ ಬಳಕೆ | ಇಪ್ಪಾಡಿ | 25 |


## ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:

**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,**
**ತಿಪಟೂರು, ತುಮಕೂರು ಜಿಲ್ಲೆ**